**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ: 197 /2023**

**ಸಾಕ್ಷಿಯನ್ನು ದಿಃ 13.08.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಂ.ಇ.ಪಿ ವಕೀಲರಿಂದಃ**

ನಾನು 4ನೇ ತರಗತಿವರೆಗೆ ಓದಿದ್ದೇನೆ. ಆರೋಪಿಯ ಗಂಡನ ಹೆಸರು ನನಗೆ ಗೊತ್ತಿಲ್ಲ. ಅವರ ಮನೆ ನಂಬರ್ ಗೊತ್ತಿಲ್ಲ. ಅವರು ಮಂಜುನಾಥ ಬಡಾವಣೆಯಲ್ಲಿ ವಾಸ ಮಾಡುತ್ತಾರೆ ಎಂದು ಗೊತ್ತು. ಮಂಜುನಾಥ ಬಡಾವಣೆಯ ಯಾವ ಬೀದಿಯಲ್ಲಿ ಆರೋಪಿಯ ಮನೆ ಬರುತ್ತದೆ ಎಂದು ಗೊತ್ತಿಲ್ಲ. ಆರೋಪಿ PWD ಕಚೇರಿಯಲ್ಲಿ ಕೆಲಸ ಮಾಡುತ್ತಾರೆ. ಆರೋಪಿ PWDಯ ಎರಡು ಕಚೇರಿಯ ಪೈಕಿ ಯಾವ ಕಚೇರಿಯಲ್ಲಿ ಕೆಲಸ ಮಾಡುತ್ತಾರೆ ಎಂದು ಗೊತ್ತಿಲ್ಲ. ನಾನು ಆರೋಪಿಯ ಮನೆಯನ್ನು ನೋಡಿಲ್ಲ. ನನ್ನ ಅಕ್ಕ ಯಶೋಧಮ್ಮರವರ ಮನೆ ಮಂಜುನಾಥ ಬಡಾವಣೆಯಲ್ಲಿ ಇದ್ದು, ನಾನು ಅಲ್ಲಿಗೆ ಹೋಗಿ ಬರುತ್ತಿದ್ದಾಗ ಆರೋಪಿಯ ಪರಿಚಯವಾಯಿತು. ನನ್ನ ಅಕ್ಕ ಯಶೋಧಮ್ಮ ಈಗ ತಿರುಮಲ ಲೇಔಟ್ ನಲ್ಲಿ ವಾಸ ಮಾಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು, 2023 ರಲ್ಲಿ ಮಂಜುನಾಥ ಬಡಾವಣೆಯಲ್ಲಿ ವಾಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. 2023 ರಲ್ಲಿ ನನ್ನ ಅಕ್ಕ ಯಶೋಧಮ್ಮ ಮಂಜುನಾಥ ಬಡಾವಣೆಯಲ್ಲಿ ವಾಸ ಮಾಡುತ್ತಿರಲಿಲ್ಲ, ಮಾರುತಿ ಬಡಾವಣೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ಅಕ್ಕ ಯಶೋಧಮ್ಮರವರ ಮನೆ ಸುಮಾರು ಕಾಲು ಕಿ.ಮೀ ದೂರ ಇರಬಹುದು. ಆರೋಪಿ ನನಗೆ 2021 ರಲ್ಲಿ ಪರಿಚಯವಾದರು. ಪರಿಚಯ ಇದ್ದವರಿಗೆಲ್ಲಾ ಹಣ ಕೊಡುತ್ತೀರಾ ಎಂದರೆ ನನ್ನ ಅಕ್ಕನಿಗೂ ಕೂಡ ಪರಿಚಯ ಇದ್ದ ಕಾರಣ ಹಣ ಕೊಟ್ಟಿದ್ದೇನೆ.

ಹಣ ಕೊಡುವಾಗ ಆರೋಪಿ ನನಗೆ ಚೆಕ್ಕನ್ನು ಕೊಟ್ಟಿದ್ದರು. ಹಣ ಕೊಟ್ಟ ದಿನಾಂಕವೇ ಚೆಕ್ಕು ಕೊಟ್ಟಿದ್ದಾರೆ ಎಂದು ದೂರಿನಲ್ಲಿ ಬರೆಸಿಲ್ಲ. ಆ ರೀತಿ ಬರೆಸಲು ನಿಮಗೆ ತೊಂದರೆ ಇತ್ತೇ ಎಂದರೆ ಸಾಕ್ಷಿ ಸರಿಯಾಗಿ ಉತ್ತರಿಸುವುದಿಲ್ಲ. ನಾನು ವ್ಯವಸಾಯ ಮಾಡುತ್ತೇನೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನಾನು ರಾಗಿ, ಭತ್ತ, ಶುಂಠಿ ಮತ್ತು ತಂಬಾಕು

ಬೆಳೆಯುತ್ತೇನೆ. ತಂಬಾಕು ಬೆಳೆಯಲು ಲೈಸೆನ್ಸ್ ಇದೆ. ಲೈಸೆನ್ಸ್ ಇದ್ದವರು ಬೆಳೆದ ತಂಬಾಕನ್ನು ತಂಬಾಕು ಮಂಡಳಿಗೆ ಮಾರಾಟ ಮಾಡಬೇಕು ಎಂದರೆ ಸರಿ. ನಾನು ಕೃಷಿ ಮಾಡಲು ಮತ್ತು ಹೊಗೆಸೊಪ್ಪು ಬೆಳೆಯಲು ಮತ್ತು ಬೇಯಿಸಲು ಬ್ಯಾಂಕ್ ನಿಂದ ಬೆಳೆ ಸಾಲ ಪಡೆಯುತ್ತೇನೆ. ನಾನು ಹುಣಸೂರಿನ ಎಸ್.ಬಿ.ಐ ನ ಎಡಿಬಿ ಶಾಖೆಯಲ್ಲಿ ಸಾಲ ಪಡೆದಿದ್ದೇನೆ. ನಾನು ಪ್ರತೀವರ್ಷ ರೂ. 3ವರೆ ಲಕ್ಷದಷ್ಟು ಬೆಳೆ ಸಾಲ ಪಡೆಯುತ್ತೇನೆ. ಹೊಗೆಸೊಪ್ಪು ಮಾರಾಟ ಮಾಡಿ ಬಂದ ಹಣವನ್ನು ಸಾಲಕ್ಕೆ ಕಡಿತ ಮಾಡಿಸುತ್ತೇನೆ. 2023 ರಲ್ಲಿ 4 ಸಾವಿರ ಕೆ.ಜಿ ಹೊಗೆಸೊಪ್ಪು ಬೆಳೆದಿದ್ದೇನೆ. ತಂಬಾಕು ಮಂಡಳಿಗೆ ಹೊಗೆಸೊಪ್ಪು ಮಾರಾಟ ಮಾಡಿದಾಗ ರಶೀದಿ ಕೊಡುತ್ತಾರೆ. ಆ ರೀತಿ ನೀಡಿದ ರಶೀದಿಯನ್ನು ಇಟ್ಟುಕೊಳ್ಳುತ್ತೇನೆ ಎಂದರೆ ಬೇಕಿದ್ದರೆ ಇಟ್ಟುಕೊಳ್ಳುತ್ತೇನೆ ಇಲ್ಲದಿದ್ದರೆ ನಾಶಪಡಿಸುತ್ತೇನೆ. 2023 ರಲ್ಲಿ ಹೊಗೆಸೊಪ್ಪು ಮಾರಾಟ ಮಾಡಿದ ಬಗ್ಗೆ ತಂಬಾಕು ಮಂಡಳಿಯಿಂದ ಹಣ ನೇರವಾಗಿ ನನ್ನ ಬ್ಯಾಂಕ್ ಖಾತೆಗೆ ಜಮಾ ಆಗುತ್ತದೆ. ಸಾಲಕ್ಕೆ ಕಡಿತಗೊಳಿಸಿದ ನಂತರ ಹೆಚ್ಚು ಹಣ ಉಳಿದರೆ ಚೆಕ್ ಮೂಲಕ ಡ್ರಾ ಮಾಡುತ್ತೇನೆ. 2023ರಲ್ಲಿ ನನಗೆ ತಂಬಾಕು ಬೆಳೆಯಿಂದ ಸುಮಾರು 8 ರಿಂದ 9 ಲಕ್ಷ ಆದಾಯ ಬಂದಿತ್ತು. ಸದರಿ 9 ಲಕ್ಷದಲ್ಲಿ ಬ್ಯಾಂಕ್ ನವರು ರೂ. 1 ಲಕ್ಷವನ್ನು ಬಡ್ಡಿಗೆ ವಜಾ ಮಾಡಿ 8 ಲಕ್ಷ ನನಗೆ ಕೊಟ್ಟಿದ್ದಾರೆ. 4 ಸಾವಿರ ಕೆ.ಜಿ ತಂಬಾಕು ಬೆಳೆಯಲು ಅಂದಾಜು 2ವರೆ ಲಕ್ಷ ಖರ್ಚು ಬರುತ್ತದೆ.

ಶುಂಠಿ ಬೆಳೆಗಾಗಿ SBI ನಿಂದ ಹಾಗೂ ತಂಬಾಕು ಬೆಳೆಯಲು ಕೆನರಾ ಬ್ಯಾಂಕ್ ನಿಂದ ಸಾಲ ಪಡೆಯುತ್ತೇನೆ. ಶುಂಠಿ ಬೆಳೆಯಲು ಸುಮಾರು 4 ಲಕ್ಷ ಸಾಲ ಪಡೆದಿದ್ದೇನೆ. ಶುಂಠಿ ಬೆಳೆಯಲು ಎಂದೇ ಸಾಲ ಪಡೆದಿದ್ದೇನೆ. ರಾಷ್ಟ್ರೀಕೃತ ಬ್ಯಾಂಕ್ ಗಳಲ್ಲಿ ಒಂದು ಬ್ಯಾಂಕ್ ನಿಂದ ಸಾಲ ಪಡೆದರೇ ಇನ್ನೊಂದು ಬ್ಯಾಂಕ್ ನಿಂದ ಸಾಲ ಕೊಡುವುದಿಲ್ಲ ಎಂದರೆ ಸರಿಯಲ್ಲ. ಶುಂಠಿ ಬೆಳೆಯಲು ಬ್ಯಾಂಕ್ ನಿಂದ ಸಾಲ ಕೊಡುವುದಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ವ್ಯವಹಾರಕ್ಕೆ ಸಂಬಂಧಿಸಿದಂತೆ ಬ್ಯಾಂಕ್ ನ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ತೊಂದರೆ ಇಲ್ಲ. ನಾನು ಯಾವುದೇ ವ್ಯವಸಾಯ ಮಾಡುವುದಿಲ್ಲ, ನನಗೆ ಜಮೀನು ಇಲ್ಲ, ಹಾಗೂ ತಂಬಾಕು ಮತ್ತು ಶುಂಠಿ ಬೆಳೆಯುವುದಿಲ್ಲ ಎಂದರೆ ಸರಿಯಲ್ಲ. 2023 ರಲ್ಲಿ ನಾನು 4 ಸಾವಿರ ಕೆ.ಜಿ ತಂಬಾಕು

ಬೆಳೆದಿಲ್ಲ ಮತ್ತು ಶುಂಠಿ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ಯಶೋಧಮ್ಮ ನನ್ನ ಸ್ವಂತ ಅಕ್ಕ. ಅವರು ಹಣಕಾಸಿನ ಲೇವಾದೇವಿ ಮಾಡುತ್ತಾರೆ ಎಂದರೆ ಇಲ್ಲ. ನನ್ನ ಅಕ್ಕ ಯಶೋಧಮ್ಮ 10–20 ಸಾವಿರ ಹಣಕಾಸಿನ ವ್ಯವಹಾರ ಮಾಡಿ ಖಾಲಿ ಚೆಕ್ ಪಡೆದುಕೊಳ್ಳುತ್ತಾರೆ ಎಂದರೆ ಸರಿಯಲ್ಲ.

2023 ಮಾರ್ಚ್ ತಿಂಗಳಲ್ಲಿ ಸಾಲ ಕೊಟ್ಟಿದ್ದೇನೆ. ತಾರೀಖು ನೆನಪಿಲ್ಲ. ಆ ಬಗ್ಗೆ ದೂರಿನಲ್ಲಿ ಬರೆಸಿದ್ದಿರಾ ಎಂದರೆ ಇಲ್ಲ. ಆ ರೀತಿ ಬರೆಸಲು ತೊಂದರೆ ಇತ್ತೇ ಎಂದರೆ ಇತ್ತು. ಹಣ ಕೊಡುತ್ತಾರೆ ಎಂಬ ಕಾರಣದಿಂದ ಬರೆಸಿಲ್ಲ. ಈ ಪ್ರಕರಣವನ್ನು ಹೊರತುಪಡಿಸಿ ನಾನು ಬೇರೆಯವರ ಜೊತೆ ಹಣಕಾಸಿನ ವ್ಯವಹಾರ ಮಾಡಿದ್ದೆ. ನಾನು ಧರ್ಮಸೇಟ್ ಎಂಬ ವ್ಯಕ್ತಿಗೆ 4 ಲಕ್ಷ ಸಾಲ ಕೊಟ್ಟಿದ್ದೆ. ಆ ಸಾಲವನ್ನು 2017–18 ರಲ್ಲಿ ಕೊಟ್ಟಿದ್ದೆ. ನಾನು ಹೇಳುವ ಧರ್ಮಸೇಟ್ ಸ್ವತಃ ಬೇರೆಯವರಿಗೆ ಸಾಲ ಕೊಡುತ್ತಾರೆಯೇ ಹೊರತು ಸಾಲ ಪಡೆದುಕೊಳ್ಳುವುದಿಲ್ಲ ಎಂದರೆ ಸರಿಯಲ್ಲ. ನಾನು ಇಲ್ಲಿಯವರೆಗೆ ಯಾರಿಗೂ ಕೂಡ ಸಾಲ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನೇ ಯಶೋಧಮ್ಮರವರಿಂದ ಸಾಲ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಶೋಧಮ್ಮರವರೊಂದಿಗೆ ಹಣಕಾಸಿನ ವ್ಯವಹಾರ ಇಟ್ಟುಕೊಂಡಿದ್ದೇನೆ ಎಂದರೆ ಸರಿಯಲ್ಲ.

3 ತಿಂಗಳ ಒಳಗೆ ಚೆಕ್ ಮೂಲಕ ಹಣ ಡ್ರಾ ಮಾಡಿ ಎಂದು ಆರೋಪಿ ಹೇಳಿದ್ದರು. ಈ ಬಗ್ಗೆ ದೂರಿನಲ್ಲಿ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ರೂ. 3 ಲಕ್ಷ ನನ್ನ ಬಳಿ ಇತ್ತು ಎಂದು ತೋರಿಸಲು ದಾಖಲೆ ಇಲ್ಲ. ರೂ. 3 ಲಕ್ಷ ಸಾಲ ಕೊಡುವಷ್ಟು ಆರ್ಥಿಕ ಸಾಮರ್ಥ್ಯ ನನಗೆ ಇಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿ ಮಧ್ಯೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನನ್ನು ನ್ಯಾಯಾಲಯಕ್ಕೆ ಬಂದಾಗ ಪ್ರಥಮ ಬಾರಿಗೆ ನೋಡಿದ್ದಾರೆಯೇ ಹೊರತು ಅದಕ್ಕೂ ಮೊದಲು ನನಗೂ ಆರೋಪಿಗೂ ಪರಿಚಯ ಇರಲಿಲ್ಲ ಎಂದರೆ ಸರಿಯಲ್ಲ. 2023ಮಾರ್ಚ್ ತಿಂಗಳಲ್ಲಿ ಆರೋಪಿ ಸಾಲ ಕೇಳಲು ನನ್ನನ್ನು ಭೇಟಿಯಾಗಿದ್ದರು. ಆಗ ಬೇರೆ ಯಾರು ಇರಲಿಲ್ಲ. ಆರೋಪಿ ನನ್ನನ್ನು ನನ್ನ ಅಕ್ಕನ ಮನೆಯಲ್ಲಿ ಭೇಟಿ ಮಾಡಿದರು. ಆಗ ನನ್ನ ಅಕ್ಕನ ಮನೆಯಲ್ಲಿ ನನ್ನನ್ನು ಮತ್ತು ಆರೋಪಿಯನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ನಾನು ಹಣವನ್ನು ನನ್ನ ಅಕ್ಕನ ಮನೆಯಲ್ಲಿ ಕೊಟ್ಟಿದ್ದೇನೆ. ಆಗ ನಾನು ಮತ್ತು ಆರೋಪಿ

ಮಾತ್ರ ಇದ್ದೆವು. ಮಾರುತಿ ಬಡಾವಣೆಯಲ್ಲಿರುವ ನನ್ನ ಅಕ್ಕನ ಮನೆಯಲ್ಲಿ ಸಿಸಿ ಕ್ಯಾಮರಾ ಇತ್ತು ಎಂದರೆ ಇಲ್ಲ. ಇದ್ದರೂ ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನನ್ನ ಅಕ್ಕ ವಾಸ ಮಾಡುತ್ತಿರುವ ಮನೆಯಲ್ಲಿ ಸಿಸಿ ಕ್ಯಾಮರಾ ಇದೆ. ನನ್ನ ಅಕ್ಕ ಮೊದಲು ವಸ ಮಾಡುತ್ತಿದ್ದ ಜಾಗದಲ್ಲಿ ಹೆಚ್ಚಾಗಿ ಕಳ್ಳತನವಾಗುತ್ತದೆ ಎಂದು ಮನೆಯ ಹೊರಗೆ ಸಿಸಿ ಕ್ಯಾಮರಾ ಹಾಕಿದ್ದರು ಎಂದರೆ ಇಲ್ಲ. ಆರೋಪಿ ನನ್ನ ಅಕ್ಕನ ಮನೆಯಲ್ಲಿ ನನ್ನನ್ನು ಯಾವತ್ತು ಭೇಟಿ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಸಾಲ ಬೇಕೆಂದು ಕೇಳಿಲ್ಲ ಮತ್ತು ನನ್ನಿಂದ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಪೂರ್ವಾಪರದ ಬಗ್ಗೆ ನಾನು ವಿಚಾರಿಸಿಲ್ಲ. ಆರೋಪಿಗೆ ಏನು ಆಸ್ತಿ ಇದೆ ಎಂದು ನಾನು ತಿಳಿದುಕೊಂಡಿಲ್ಲ. ಯಾವುದೇ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಸಾಲ ಕೊಡಬೇಕಾದರೆ ಮರು ಪಾವತಿ ಮಾಡುವ ಸಾಮರ್ಥ್ಯ ಇದೇಯೇ ಇಲ್ಲವೆ ಎಂದು ತಿಳಿದುಕೊಳ್ಳುತ್ತಾರೆ ಎಂದರೆ PWD ನೌಕರಳಾಗಿದ್ದ ಕಾರಣ ಸಾಲ ಕೊಟ್ಟಿದ್ದೇನೆ. ಆರೋಪಿ PWD ಯಲ್ಲಿ ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿಲ್ಲ. ಅವರಿಗೆ ಎಷ್ಟು ಸಂಬಳ ಬರುತ್ತದೆ ಎಂದು ಗೊತ್ತಿಲ್ಲ. ಆರೋಪಿ ಕೆಲಸ ಮಾಡುವುದನ್ನು ನಾನು ಖುದ್ದಾಗಿ ನೋಡಿಲ್ಲ. ಆರೋಪಿಯ ಮಕ್ಕಳು ಮದುವೆಯಾಗಿ ಗಂಡನ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಆರೋಪಿಯ ಮಗಳ ಕೈ ಸಾಲ ತೀರಿಸಲು ಮತ್ತು ಮನೆ ಖರ್ಚಿಗಾಗಿ ನನ್ನಿಂದ ಸಾಲ ಪಡೆದುಕೊಂಡಿದ್ದಾರೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಅಕ್ಕನಿಂದ ರೂ.25 ಸಾವಿರ ಸಾಲ ಪಡೆದು ಅದರ ಭದ್ರತೆಗಾಗಿ ನಿಪಿ–1ರ ಚೆಕ್ಕನ್ನು ನನ್ನ ಅಕ್ಕನಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ರೂ.25 ಸಾವಿರ ಸಾಲವನ್ನು ವಾಪಸ್ಸು ಕೊಟ್ಟಿದ್ದಾರೆ ಎಂದರೆ ಕೊಟ್ಟಿಲ್ಲ ಕೊಟ್ಟಿದರೇ ಯಾಕೆ ಕೇಸು ಹಾಕುತ್ತಿದ್ದೆ ಎಂದು ನುಡಿಯುತ್ತಾರೆ. ಆರೋಪಿ ತೆಗೆದುಕೊಂಡ ರೂ.25 ಸಾವಿರ ಸಾಲವನ್ನು ನನ್ನ ಅಕ್ಕನಿಗೆ ವಾಪಸ್ಸು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ನನ್ನ ಅಕ್ಕ ಮತ್ತು ಇತರರು ಉಳಿತಾಯ ಮಾಡಲು ಸಂಘದಲ್ಲಿ ಹಣ ಇಡುತ್ತಿದ್ದರು ಎಂದರೆ ಗೊತ್ತಿಲ್ಲ. ಆ ರೀತಿ ಸಂಘ ನಡೆಸುವಾಗ ಆರೋಪಿ ಮತ್ತು ನನ್ನ ಅಕ್ಕನ ಮಧ್ಯೆ ಸಣ್ಣ–ಪುಟ್ಟ ವಿಚಾರಕ್ಕೆ ಜಗಳವಾಗಿದೆ ಎಂದರೆ ಗೊತ್ತಿಲ್ಲ. ಆ ಜಗಳದಿಂದಾಗಿ ಆರೋಪಿ ಮತ್ತು ನನ್ನ ಅಕ್ಕನ ಮಧ್ಯೆ ಮನಸ್ತಾಪ ಉಂಟಾಯಿತು ಎಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದಾಗಿ ನನ್ನ ಅಕ್ಕ ಆರೋಪಿಗೆ ಪಾಠ ಕಲಿಸುತ್ತೇನೆ ಎಂದು ಹೇಳಿ ನನ್ನಮೂಲಕ ಈ ಚೆಕ್ಕನ್ನು ಹಾಜರುಪಡಿಸಿದ್ದಾರೆ ಎಂದರೆ

ಸರಿಯಲ್ಲ. ನಂತರ ಆರೋಪಿ ನನ್ನಅಕ್ಕನ ಬಳಿ ಚೆಕ್ ವಾಪಸ್ಸು ಕೊಡುವಂತೆ ಹಲವಾರು ಬಾರಿ ಕೇಳಿದರು ಎಂದರೆ ಸರಿಯಲ್ಲ. ನಾನು ನೋಟಸ್ ಕಳುಹಿಸಿದ ನಂತರವು ಕೂಡ ಆರೋಪಿ ನನ್ನ ಅಕ್ಕನ ಬಳಿ ಯಾಕೆ ಕೇಸು ಹಾಕಿದ್ದೀರಾ ಎಂದು ಕೇಳಿದ್ದಾರೆ ಎಂದರೆ ಸರಿಯಲ್ಲ. ಆಗ ನನ್ನ ಅಕ್ಕ ಕೇಸು ಹಾಕುವುದಿಲ್ಲ. ವಾಪಸ್ಸು ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದರಿಂದ ಆರೋಪಿ ನೋಟಿಸ್ ಗೆ ಉತ್ತರ ಕೊಟ್ಟಿಲ್ಲ ಎಂದರೆ ಸರಿಯಲ್ಲ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು**, **ಕೋರಿಕೆ ಮೇರೆಗೆ ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.